## ಕುಗ್ಗಿದ ಅರಣ್ಯ ಪ್ರಮಾಣ: ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳ ವರದಿ

# ಅಭಿವೃದ್ಧಿಗಾಗಿ 1.55 ಲಕ್ಷ ಎಕರೆ ಅರಣ್ಯಕ್ಕೆ ಕುತ್ತು

• ಯತೀಶ್ ಕುಮಾರ್ ಜಿ.ಡಿ,
ಮಂಜುನಾಥ ಹೆಬ್ಬಾರ್

**ಬೆಂಗಳೂರು:** 'ಸ್ವಾತಂತ್ರ್ಯ ಸಿಕ್ಕ ಬಳಿಕ ಉತ್ತರ ಕನ್ನಡ ಜಿಲ್ಲೆಯಲ್ಲಿ 61,860 ಹೆಕ್ಟೇರ್ (1.55 ಲಕ್ಷ ಎಕರೆ) ಅರಣ್ಯ ಪ್ರದೇಶವನ್ನು ಅಭಿವೃದ್ಧಿ ಯೋಜನೆಗಳು ಹಾಗೂ ಪುನರ್ವಸತಿ ಯೋಜನೆಗಳಿಗಾಗಿ ಭೂಪರಿವರ್ತನೆ ಮಾಡಲಾಗಿದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವರದಿ ಬೆಳಕು ಚೆಲ್ಲಿದೆ.

ಸಂಸ್ಥೆಯ ಪರಿಸರ ವಿಜ್ಞಾನ ವಿಭಾಗದ ವಿಜ್ಞಾನಿ ಡಾ.ಟಿ.ವಿ. ರಾಮಚಂದ್ರ ನೇತೃತ್ವದ ಮೂವರು ಸಂಶೋಧಕರ ತಂಡ ಮೂರು ವರ್ಷ ಅಧ್ಯಯನ ನಡೆಸಿ ಈ ವರದಿ ಸಿದ್ಧಪಡಿಸಿದೆ. 'ಜಿಲ್ಲೆಯಲ್ಲಿ ಈ ಹಿಂದೆ ಶೇ 64ರಷ್ಟು ಅರಣ್ಯ ಪ್ರದೇಶ ಇತ್ತು. ಈಗ ಹಸಿರಿನ ಪ್ರಮಾಣ ಶೇ 30ಕ್ಕೆ ಇಳಿದಿದೆ' ಎಂದು ಹೇಳಿದೆ.

ಜಿಲ್ಲೆಯಲ್ಲಿ ಭವಿಷ್ಯದಲ್ಲಿ ಇನ್ನಷ್ಟು ಬೃಹತ್ ಯೋಜನೆಗಳಿಗೆ ಪರಿಸರ ಸೂಕ್ಷ್ಮ ಪ್ರದೇಶಗಳನ್ನು ಬಳಸಿಕೊಂಡರೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ವರದಿ ಎಚ್ಚರಿಸಿದೆ. ಪರಿಸರ ಸಮತೋಲನ ಕಾಪಾಡಲು ಸ್ಥಳೀಯರ ನೆರವು ಪಡೆದು ಅರಣ್ಯೀಕರಣ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು ಎಂದೂ ಕಿವಿಮಾತು ಹೇಳಿದೆ. 'ಜಿಲ್ಲೆಯಲ್ಲಿ ಹತ್ತಾರು ಯೋಜನೆಗಳು ಅನುಷ್ಠಾನಗೊಂಡಿವೆ. ಈಗ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ನಿರ್ಮಾಣಕ್ಕೆ ಅನುವು ಮಾಡಿಕೊಡುವುದು ಸರಿಯಲ್ಲ. ಇನ್ನಷ್ಟು ಪರಿಸರ ಛಿದ್ರೀಕರಣವಾಗಲಿದೆ' ಎಂದು ಪರಿಸರ ಪ್ರೇಮಿಗಳು ಒತ್ತಾಯಿಸಿದ್ದಾರೆ.

'1981ರ ಬಳಿಕ ಕಾಳಿ ನದಿಯ ಮೀಸಲು ಪ್ರದೇಶದಲ್ಲೇ 98 ಗಣಿ ಗುತ್ತಿಗೆಗಳನ್ನು ನೀಡಲಾಗಿದೆ. ಜೋಯಿಡಾ, ಯಲ್ಲಾಪುರ ಹಾಗೂ ಕಾರವಾರ ತಾಲ್ಲೂಕುಗಳ 14,894 ಹೆಕ್ಟೇರ್ ಅರಣ್ಯ ಗಣಿಗಾರಿಕೆಯಿಂದ ತತ್ತರಿಸಿದೆ' ಎಂದು ವರದಿ ತಿಳಿಸಿದೆ.

'ಕಾಳಿ ಜಲವಿದ್ಯುತ್ ಯೋಜನೆಯಿಂದ 36,000 ಎಕರೆ ಜಾಗ ಮುಳುಗಡೆಯಾಗಿದೆ. ಇದರಲ್ಲಿ ಅರಣ್ಯ ಪ್ರದೇಶವೇ 25,000 ಎಕರೆ ಇದೆ. ಈ ಯೋಜನೆಗಾಗಿ ಕೊಡಸಳ್ಳಿ, ಕದ್ರಾ ಹಾಗೂ ದಾಂಡೇಲಿಗಳಲ್ಲಿ ಅಣೆಕಟ್ಟೆಗಳ ನಿರ್ಮಿಸಲಾಗಿದೆ. ಇವುಗಳಿಗಾಗಿ ನೂರಾರು ಎಕರೆ ಅರಣ್ಯ ಭೂಮಿಗೆ ಕುತ್ತು ಉಂಟಾಗಿದೆ' ಎಂದೂ ತಿಳಿಸಿದೆ.

'ಬೆಂಗಳೂರಿನಲ್ಲಿ ನಾಲ್ಕೈದು ಮರಗಳನ್ನು ಕಡಿದರೆ ಇಡೀ ನಾಡೇ ಹಾಳಾಯಿತು ಎಂಬಂತೆ ಬೊಬ್ಬೆ ಹೊಡೆಯುತ್ತೇವೆ. ಆದರೆ, ಬೃಹತ್ ಯೋಜನೆಗಳ ಹೆಸರಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಜೀವವೈವಿಧ್ಯಕ್ಕೆ ಭಾರಿ ಪ್ರಮಾಣದಲ್ಲಿ ಏಟು ಬೀಳುತ್ತಿದೆ. ಈ ಬಗ್ಗೆ ಧ್ವನಿ ಎತ್ತುವವರು ಬೆರಳೆಣಿಕೆಯ ಮಂದಿ' ಎಂದು ವನ್ಯಜೀವಿ ಕಾರ್ಯಕರ್ತರೊಬ್ಬರು ಬೇಸರ ವ್ಯಕ್ತಪಡಿಸುತ್ತಾರೆ.

'ಜಿಲ್ಲೆಯ ಕಾಡು ನಾಶದ ಪರಿಣಾಮ ತಟ್ಟಲಾರಂಭಿಸಿದೆ. ಕಳೆದ 3-4 ವರ್ಷಗಳಲ್ಲಿ ಜಿಲ್ಲೆಯಲ್ಲಿ ಮಳೆ ಪ್ರಮಾಣ ಕಡಿಮೆಯಾಗಿದೆ' ಎಂದು ಅವರು ಆತಂಕ ವ್ಯಕ್ತಪಡಿಸುತ್ತಾರೆ.

**ಸ್ವಾತಂತ್ರ್ಯ ನಂತರ ಜಿಲ್ಲೆಯಲ್ಲಿ ಅರಣ್ಯ ಭೂಮಿ ಅರಣ್ಯೇತರ ಉದ್ದೇಶಕ್ಕೆ ಬಳಕೆ**

| ಉದ್ದೇಶ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) |
|---|---|
| ಕೃಷಿಗೆ | 6042 |
| 1969ರಲ್ಲಿ ಸರ್ಕಾರಿ ಆದೇಶ ಪ್ರಕಾರ | 11593 |
| 1974ರಲ್ಲಿ ಸರ್ಕಾರಿ ಆದೇಶ ಪ್ರಕಾರ | 3390 |
| ದೀರ್ಘಕಾಲದ ಗುತ್ತಿಗೆಗೆ | 162 |
| ಟೌನ್‌ಶಿಪ್‌ಗೆ | 1096 |
| ಗಣಿಗಾರಿಕೆಗೆ | 1591 |
| ವಸತಿರಹಿತರಿಗೆ ಮನೆ ನಿರ್ಮಾಣಕ್ಕೆ | 366 |
| ಪುನರ್ವಸತಿಗೆ | 6448 |
| ಜಲವಿದ್ಯುತ್ ಹಾಗೂ ನೀರಾವರಿ ಯೋಜನೆಗೆ | 15202 |
| ವಿದ್ಯುತ್ ವಿತರಣಾ ಜಾಲಕ್ಕೆ | 677 |
| ಶರಾವತಿ ಯೋಜನೆಗೆ | 700 |
| ಕೈಗಾ ಸ್ಥಾವರಕ್ಕೆ | 732 |
| ಸೀಬರ್ಡ್ | 2259 |
| ಕೊಂಕಣ ರೈಲು | 272 |
| ಒತ್ತುವರಿಯ ಸಕ್ರಮ | 2824 |
| ಒಟ್ಟು | 61860 |

**ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ**




## ಸುದ್ದಿ 2

### ಚಿನ್ನದ ನಾಣ

**ಮಳವಳ್ಳಿ:** ತಾಲ್ಲೂಕಿನ ಬಾಣಸಮುದ್ರ ಗ್ರಾಮದಲ್ಲಿ ಬುಧವಾರ ಮನೆಕಟ್ಟಲು ಅಡಿಪಾಯದ ಮಣ್ಣು ತೆಗೆಯುವಾಗ ಹಳೆಯ ಚಿನ್ನದ ನಾಣ್ಯಗಳು ಪತ್ತೆಯಾಗಿವೆ.

ಗ್ರಾಮದ ಲಕ್ಷ್ಮಮ್ಮ ಎಂಬುವರಿಗೆ ಸೇರಿದ ಸ್ಥಳದಲ್ಲಿ ಮಣ್ಣು ತೆಗೆಯುವಾಗ ಸಣ್ಣದೊಂದು ಮಡಿಕೆ ಪತ್ತೆಯಾಯಿತು. ಕಾರ್ಮಿಕರು ಹೊರತೆಗೆದು ನೋಡಿದಾಗ ಒಳಗೆ ಚಿನ್ನದ ನಾಣ್ಯಗಳು ಪತ್ತೆಯಾಗಿವೆ.

ಸ್ಥಳಕ್ಕೆ ಭೇಟಿ ನೀಡಿದ

### ನಾನು, ಯಡಿ ಜೀವ; ಎರಡು

**ಕೊಪ್ಪಳ:** 'ಬಿ.ಎಸ್.ಯಡಿಯೂರಪ್ಪ